**ಅಸಲು ದಾವ ಸಂಖ್ಯೆಃ 463/2018**
**ಡಿ.ಡಬ್ಲೂ -1**

ದಿಃ 30.05.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಪಾಟೀ ಸವಾಲು ಶ್ರೀ ಎಸ್ ಜಿ ಕೆ ವಾದಿ ಪರ ವಕೀಲರವರಿಂದಃ-**

1. ನಾನು 7 ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಮಲ್ಲಪ್ಪಾ ಎಂಬ ಒಬ್ಬ ಅಣ್ಣ ಹಾಗೂ ಮಾಣೀಕ ಎಂಬ ಒಬ್ಬ ತಮ್ಮ ಇರುತ್ತಾರೆ. ನಾನು ಈ ಪ್ರಕರಣದಲ್ಲಿ ವಾದಿಯರು ಹಾಜರುಪಡಿಸಿರುವ ಕೆಲವು ದಾಖಲೆಗಳನ್ನು ಮಾತ್ರ ನೋಡಿರುತ್ತೇನೆ. ವಾದಿಯು ಜಾಗ ನಮ್ಮದು ಎಂದು ಪ್ರಕರಣ ದಾಖಲಿಸಿರುತ್ತಾರೆ. ಕಲ್ಲಪ್ಪಾ ಮಹಾದೇವ ಪಾಟೀಲ ರವರು 2006 ರಲ್ಲಿ ಮೃತರಾಗಿರುತ್ತಾರೆ. ಕಲ್ಲಪ್ಪಾ ಮಹಾದೇವ ಪಾಟೀಲ ರವರ ಮೊಮ್ಮಕ್ಕಳು ವಾದಿ ನಂಬರ 1 ಮತ್ತು 2 ಎಂದರೆ ನನಗೆ ಗೊತ್ತಿಲ್ಲ. ವಾದಿಯವರ ಪರಿಚಯ ನನಗೆ ಇರುವುದಿಲ್ಲ. ಕಲ್ಲಪ್ಪಾ ಮಹಾದೇವ ಪಾಟೀಲ ರವರಿಗೆ 1 ಗಂಡು ಮತ್ತು 3 ಹೆಣ್ಣು ಮಕ್ಕಳು ಇದ್ದರು. ಕಲ್ಲಪ್ಪಾ ಮಹಾದೇವ ಪಾಟೀಲ ರವರ ಮಗನ ಹೆಸರು ವೈಜು ಎಂದರೆ ಸರಿ. ಶ್ರೀನಾಥ ಮತ್ತು ವಿಜಯ ರವರ ತಂದೆಯ ಹೆಸರು ವೈಜು ಎಂದರೆ ಸರಿ. ಕಲ್ಲಪ್ಪಾ ಮಹಾದೇವ ಪಾಟೀಲ ರವರು ದಾವಾ ಆಸ್ತಿಯ ಮಾಲೀಕರು ಎಂದರೆ ಸರಿ. ಕಲ್ಲಪ್ಪಾ ಮಹಾದೇವ ಪಾಟೀಲ ರವರಿಗೆ ದಾವಾ ಆಸ್ತಿ ಭಕ್ಷಿಸ ಮುಖಾಂತರ ಬಂದಿತ್ತು ಎಂದರೆ ಸರಿ. ಸದರಿ ಭಕ್ಷಿಸನ ಮುಖಾಂತರ ಕಲ್ಲಪ್ಪಾ ಮಹಾದೇವ ಪಾಟೀಲ ರವರ ಹೆಸರು ಆಸ್ತಿಯ ಉತಾರಗಳಲ್ಲಿ ದಾಖಲಾಗಿತ್ತು ಎಂದರೆ ಸರಿ. ಸದರಿ ದಾವಾ ಆಸ್ತಿಯ ಉತಾರಗಳಲ್ಲಿ ವಾದಿಯರ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ನಾನು ಸ್ವತಃ ಹೇಳುತ್ತೇನೆ ಸದರಿ ಹೆಸರು ದಾಖಲಿಸಿರುವುದು ಬನವಾಟಿಯಾಗಿರುತ್ತದೆ.

2. ಕಲ್ಲಪ್ಪಾ ಮಹಾದೇವ ಪಾಟೀಲ ರವರು  ಮತ್ತು ಪತ್ರವನ್ನು ವಾದಿಯರ ಹೆಸರಿಗೆ ಬರೆದುಕೊಟ್ಟ ಆಧಾರ ಮೇಲೆ ಒಂದು P and Sc ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆದ ಆದೇಶದ ಮೇರೆಗೆ ನಾನು Misc Appeal ನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣ ಮಾನ್ಯ 2 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಬೆಳಗಾವಿಯಲ್ಲಿ  Misc Appeal No. 72/2018 ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ನಾನು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರನ್ನು ದಾಖಲಿಸಿಕೊಂಡಿಲ್ಲ ಕಾರಣ ಆ ರೀತಿ ನನ್ನ ಹೆಸರನ್ನು ದಾಖಲಿಸಿಕೊಳ್ಳಲು ಬರುವುದಿಲ್ಲ. ಗ್ರಾಮಪಂಚಾಯತಿಯ ಉತಾರದಲ್ಲಿ ನನ್ನ ಹೆಸರು ಇದ್ದುದರಿಂದ ನಾನು ನನ್ನ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ದಾಖಲಿಸಿಕೊಂಡಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಸರ್ವೇ ನಂಬರ 23 ಇರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ, ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ಯಾವ ಸರ್ವೇ ನಂಬರಗಳು ಇವೆ ಎಂದು ನನಗೆ ಹೇಳಲು ಬರುವುದಿಲ್ಲ.

3. ನಾನು ನಿಶಾನೆ ಪಿ 17 ರಂತೆ ಗ್ರಾಮಪಂಚಾಯತಿಗೆ ನನ್ನ ಹೆಸರನ್ನು ಉತಾರನಲ್ಲಿ ದಾಖಲಿಸಿ ಎಂದು ಅರ್ಜಿ ನೀಡಿದ್ದೆ ಎಂದರೆ ಸರಿ. ನಿಶಾನೆ ಡಿ 49 ಕರಾರು ಪತ್ರ ನೋಂದಣಿಯಾಗಿಲ್ಲ ಎಂದರೆ ಸರಿ. ನಿಶಾನೆ ಡಿ 49 ಕರಾರು ಪತ್ರದ ಪ್ರಕಾರ ಯಾವುದೇ ನೋಂದಾಯಿತ ಖರೀದಿ ಪತ್ರ ಆಗಿಲ್ಲ ಎಂದರೆ ಸರಿ. ನಿಶಾನೆ ಪಿ 17 ರಲ್ಲಿ ನನ್ನ ಹೆಸರನ್ನು ಉತಾರನಲ್ಲಿ ದಾಖಲಿಸಲು ಅರ್ಜಿ ನೀಡಿದಾಗ ಕರಾರು ಪತ್ರವನ್ನು ಮಾತ್ರ ಅದರ ಜೊತೆಗೆ ಸಲ್ಲಿಸಿರುತ್ತೇನೆ. ನಾನು ಗ್ರಾಮಪಂಚಾಯತಿಗೆ ಅರ್ಜಿ ನೀಡುವಾಗ ನಾನು ಮಾಲೀಕನಿದ್ದೇನೆ ಎಂದು ಸುಳ್ಳು ಹೇಳಿ ಖೊಟ್ಟಿ ದಾಖಲೆಗಳನ್ನು ಸಲ್ಲಿಸಿ ನನ್ನ ಹೆಸರನ್ನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ 16 ರಲ್ಲಿ ಖುಲ್ಲಾ ಜಾಗದಲ್ಲಿ ನಿಂತು ನಾನು ಫೋಟೊ ತೆಗೆಸಿಕೊಂಡಿದ್ದೇನೆ ಎಂದರೆ

ಸರಿಯಲ್ಲ. ಮುಖ್ಯ ರಸ್ತೆಯಿಂದ ನಾನು ಕಟ್ಟಿರುವ ಮನೆ ಎಷ್ಟು ಅಂತರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನಿಶಾನೆ ಪಿ 16 ರಲ್ಲಿ ನಾನು ನಿಂತಿರುವ ಜಾಗ ಸಹ ದಾವಾ ಆಸ್ತಿ ಆಗಿರುತ್ತದೆ ಎಂದರೆ ಸರಿ. ನಾನು ಸ್ವತಃ ಹೇಳುತ್ತೇನೆ ಅದು ನನ್ನ ಜಾಗ ಆಗಿರುತ್ತದೆ.

4. ನಿಶಾನೆ ಪಿ 20 ನಾನು ಖುಲ್ಲಾ ಜಾಗದಲ್ಲಿ ನಿಂತು ತೆಗೆಸಿಕೊಂಡ ಫೋಟೋ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಉದ್ದ 108 ಫೀಟ್ ಹಾಗೂ ಅಗಲ 67 ಫೀಟ್ ಆಗಿರುತ್ತದೆ.

ಪ್ರಶ್ನೆಃ ರೇವಿನ್ಯೂ ಇಲಾಖೆಗೆ ದಾವಾ ಆಸ್ತಿಯ ಕುರಿತಾಗಿ ಕಂದಾಯವನ್ನು ತುಂಬಿದ್ದೀರಾ?
ಉತ್ತರಃ ಗ್ರಾಮಂಚಾಯತಿಗೆ ದಾವಾ ಆಸ್ತಿಯ ಕುರಿತಾಗಿ ಕಂದಾಯವನ್ನು ತುಂಬಿರುತ್ತೇನೆ.

5. ವಾದಿಯರು ದಾವಾ ಆಸ್ತಿಯ ಕುರಿತಾಗಿ 2011 ನೇ ಇಸ್ವಿಯವರೆಗೆ ಕಂದಾಯವನ್ನು ತುಂಬಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಶಾನೆ ಡಿ 14 ನ್ನು ನಾನು ಓದಿ ನೋಡಿರುತ್ತೇನೆ. ಮಾರುತಯ್ಯಾ ಕಲ್ಪತ್ರೆ ಯಾರು ಎಂದು ನನಗೆ ಗೊತ್ತಿಲ್ಲ. ನನಗೆ ಇಂಗ್ಲೀಷ ಅಂಕಿಗಳನ್ನು ಓದಲು ಬರುತ್ತದೆ. ನಿಶಾನೆ ಡಿ 15 ರಲ್ಲಿ Sl. No. 66 ರಲ್ಲಿ ಕಲ್ಪತ್ರೆ ಎಂಬ ಹೆಸರಿನ ಮುಂದೆ ಸರ್ವೇ ನಂಬರ 23 ಹಾಗೂ 22/2 ಎಂದು ಬರೆಯಲಾಗಿದೆ ಎಂದರೆ ಸರಿ. ನಿಶಾನೆ ಡಿ 15 Sl. No. 66 ರಲ್ಲಿ ಶೆಟ್ಟೆಪ್ಪಾ ಎಂದು ಬರೆದಿಲ್ಲ ಎಂದರೆ ಸರಿ, ಕಲ್ಪತ್ರೆ ಎಂದು ಬರೆದಿರುತ್ತಾರೆ. ಸರ್ವೇ ನಂಬರ 23 ರಲ್ಲಿ ನಾನು ಮನೆಯನ್ನು ಕಟ್ಟಿಲ್ಲ ಹಾಗೂ ಸರ್ವೇ ನಂಬರ 23 ನನಗೆ ಸಂಬಂಧಿಸಿಲ್ಲ. ನಿಶಾನೆ ಡಿ 15 ರಲ್ಲಿ Sl. No. 63 ರಲ್ಲಿ ಪ್ರಕಾರ ಪುಂಡಲಿಕ ಪಿಸ್ಸೆ ಎಂದು ಹೆಸರು ಬರೆದು ಸರ್ವೇ ನಂಬರ 23 ಎಂದು ತೋರಿಸಿದ್ದಾರೆ ಎಂದು ಗ್ರಾಮಪಂಚಾಯತಿಯವರು ಅದನ್ನು ತಪ್ಪಾಗಿ ತೋರಿಸಿರುತ್ತಾರೆ. ನಿಶಾನೆ ಪಿ 15 ರಲ್ಲಿ

ಉಲ್ಲೇಖಿಸಿರುವ ಮಿಂಟಿಗ್ ನ್ನು ಮಾಡಿರುವುದು 1982ನೇ ಇಸ್ವಿಯಲ್ಲಿ ನನಗೆ ತಿಳಿದು ಬಂದಿರುತ್ತದೆ. ನಿಶಾನೆ ಪಿ 15 ರಲ್ಲಿ Sl No. 63 ರಲ್ಲಿ ಸರ್ವೇ ನಂಬರ ತಪ್ಪಾಗಿ ತೋರಿಸಿದ್ದಾರೆ ಎಂದು ನಾನು ಗ್ರಾಮಪಂಚಾಯತಿಗೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಗೋಪಾಲ ಬಾಬು ಕೋಲೆ ಎನ್ನುವವರ ಮನೆ ನನ್ನ ಮನೆಯಿಂದ 4-5 ಮನೆ ಬಿಟ್ಟು ಇರುತ್ತದೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**